2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಭದ್ರಾವತಿ

**ಸಿ.ಸಿ.ನಂ.844/2026**

ಫಿರ್ಯಾದಿಃ ಅಬಕಾರಿ ಉಪನಿರೀಕ್ಷಕರು, ಭದ್ರಾವತಿ ವಲಯ

ವಿರುದ್ಧ

ಆರೋಪಿತರುಃ ರಾಜಪ್ಪ

**ದೋಷಾರೋಪಣೆ**

**ಶ್ರೀಮತಿ ಚೇತನಾ.,** 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿಯಾದ ನಾನು ಆರೋಪಿಯಾದಃ

ರಾಜಪ್ಪ ಬಿನ್ ನಿಂಗಪ್ಪ,
ವಯಸ್ಸು 61 ವರ್ಷ,
ವಾಸಃ ಅರಬಿಳಚಿ ಕ್ಯಾಂಪ್, ಭದ್ರಾವತಿ ತಾಲ್ಲೂಕು.

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆಃ

ದಿನಾಂಕ 04.12.2025 ರಂದು ಸಂಜೆ 5.30 ರ ಸಮಯದಲ್ಲಿ ಅಬಕಾರಿ ಉಪನಿರೀಕ್ಷಕರು –1 ಮತ್ತು ಅಬಕಾರಿ ಸಿಬ್ಬಂದಿಗಳು ಮತ್ತು ಪಂಚರು ಭದ್ರಾವತಿ ತಾಲ್ಲೂಕಿನ ಹಳೆ ಕೂಡ್ಲಿಗೆರೆ ಗ್ರಾಮದ ಮಹೇಶ್ವರ ಗದ್ದುಗೆ ಮಠಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿಯಾದ ನಿಮ್ಮ ವಾಹನ ಸಂಖ್ಯೆ ಕೆಎ–14–ಇಹೆಚ್–2208 ರ ಮೇಲೆ ದಾಳಿ ಮಾಡಿದಾಗ, ಸದರಿ ವಾಹನದಲ್ಲಿ 90 ಮಿ ಲಿ ಸಾಮರ್ಥದ ಒರಿಜಿನಲ್ ಚಾಯ್ಸ್ ವಿಸ್ಕಿಯ 20 ಟೆಟ್ರಾ ಪ್ಯಾಕ್ ಗಳು, 90 ಮಿಲಿ ಸಾಮರ್ಥ್ಯದ 35 ಟೆಟ್ರಾ ಪ್ಯಾಕ್ ಗಳು ಒಟ್ಟು 4.95 ಲೀಟರ್ ಮದ್ಯವನ್ನು ಅಕ್ರಮವಾಗಿ ಹೊಂದಿ ಸಾಗಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ ಮೇಲ್ಕಂಡ ಆರೋಪಿಯಾದ ನೀವು ನಿಮಗೆ ಸೇರಿದ ವಾಹನದಲ್ಲಿ ನಲ್ಲಿ ಒಟ್ಟು 4.95 ಲೀಟರ್ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡಿದ್ದು, ಆದ್ದರಿಂದ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 38(A)ರ ರೀತ್ಯಾ ಶಿಕ್ಷಾರ್ಹ ಹಾಗೂ ದಂಡನೀಯ ಅಪರಾಧವನ್ನು ಎಸಗಿರುತ್ತೀರಾ ಎಂದು ಆರೋಪಿಸಲಾಗಿದೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 08.07.2025

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಭದ್ರಾವತಿ.

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಭದ್ರಾವತಿ**

ಸಿ.ಸಿ.ನಂ.844/2026

ಫಿರ್ಯಾದಿಃ ಹಳೇನಗರ ಪೋಲೀಸ್ ಠಾಣೆ ಭದ್ರಾವತಿ ತಾಲ್ಲೂಕು.

ವಿರುದ್ಧ

ಆರೋಪಿತರುಃ ರಾಜಪ್ಪ

**ದೋಷಾರೋಪಣೆ**

1. ಈಗ ನಿಮಗೆ ಓದಿ ಹೇಳಿದ ಆಪಾಧನೆ ತಿಳಿಯಿತೇ?
ಉಃ

2. ಸದರಿ ಆಪಾಧನೆಗಳಿಗಾಗಿ ತಪ್ಪೊಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗೋ ಬಯಸುತ್ತೀರೋ?
ಉಃ

(ಆರೋಪಿಗಳು ಹೇಳಿದ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವ ಹಸ್ತಾಕ್ಷರದಲ್ಲಿ ಬರೆಯಲಾಗಿರುತ್ತದೆ.)

ದಿನಾಂಕಃ 08.07.2026.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಭದ್ರಾವತಿ.